**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**MVC No.1514/2025**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ರಫೀಕಅಹ್ಮದಖಾನ ಧಾರವಾಡ | ಪಿಡಬ್ಲ್ಯೂ | 01 |
| ತಂದೆ ಹೆಸರು | : | ಮೋದಿನಖಾನ | | |
| ವಯಸ್ಸು | : | 38 ವರ್ಷ | | |
| ಉದ್ಯೋಗ | : | ಖಾಸಗಿ ನೌಕರಿ | | |
| ವಾಸ ಸ್ಥಳ | : | ಹುಬ್ಬಳ್ಳಿ | | |

**ದಿನಾಂಕ: 13.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ. ಆರ್ ಎಸ್ ಜಿ ವಕೀಲರಿಂದ

ನಾನು ಈ ಅರ್ಜಿಯಲ್ಲಿ 2 ನೇ ಅರ್ಜಿದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ. ನನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ನಿಶಾನಿಸಬೇಕೆಂದು ಕೇಳಿಕೊಳ್ಳುತ್ತೇನೆ.

| | |
|---|---|
| ನಿ ಪಿ 1 | ಹುಬ್ಬಳ್ಳಿ ಸೌತ್ ಟ್ರಾಫಿಕ ಪಿ ಎಸ್ ಕ್ರೈಂ ನಂ. 40/2025 ರಲ್ಲಿನ FIR ನ ದೃಡಿಕೃತ ನಕಲು |
| ನಿ ಪಿ 2 | ದೂರಿನ ದೃಡಿಕೃತ ನಕಲು |
| ನಿ ಪಿ 3 | ಸ್ಥಳ ಪಂಚನಾಮೆ ನಕಾಶೆ ಸಹಿತ |
| ನಿ ಪಿ 4 | ಎಂ ವಿ ವರದಿ |
| ನಿ ಪಿ 5 | ಅಂತಿಮ ವರದಿ |
| ನಿ ಪಿ 6 | ಮೃತ ಮೋದಿನಖಾನ ಅವರ ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಕಾರ್ಡನ್ನು ನೋಡಿ ಗುರುತಿಸಲಾಯಿತು |
| ನಿ ಪಿ 7 | ಸಾಕ್ಷಿಯ ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಕಾರ್ಡನ್ನು ನೋಡಿ ಗುರುತಿಸಲಾಯಿತು |

| | |
|---|---|
| ನಿ ಪಿ 8 | 1 ನೇ ಅರ್ಜಿದಾರಳ  ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಕಾರ್ಡನ್ನು ನೋಡಿ ಗುರುತಿಸಲಾಯಿತು |
| ನಿ ಪಿ 9 | 3 ನೇ ಅರ್ಜಿದಾರಳ  ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಕಾರ್ಡನ್ನು ನೋಡಿ ಗುರುತಿಸಲಾಯಿತು |
| ನಿ ಪಿ 10 | 4 ನೇ ಅರ್ಜಿದಾರಳ  ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಕಾರ್ಡನ್ನು ನೋಡಿ ಗುರುತಿಸಲಾಯಿತು |

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎ ಎಸ್ ಪಿ ವಕೀಲರಿಂದ**

ನನ್ನ ಪ್ರಮಾಣ ಪತ್ರದಲ್ಲಿ ಬರೆದದ ಸಂಗತಿಗಳು ಸರಿಯಾಗಿವೆ . ನನ್ನ ತಂದೆ ಮೋದಿನಖಾನ ಧಾರವಾಡ ರವರು ಅಪಘಾತದಲ್ಲಿ ತೀರಿಕೊಂಡಿದ್ದಕ್ಕೆ ಸಂಬಂಧಿಸಿದಂತೆ ಈ ಪ್ರಕಣರವನ್ನು ಪರಿಹಾರ ಕೋರಿ ದಾಖಲಿಸಲಾಗಿದೆ. ನನ್ನ ತಂದೆಗೆ ಅಪಘಾತದ ಸಮಯದಲ್ಲಿ 60 ವರ್ಷ ವಯಸ್ಸಾಗಿತ್ತು. ನಾನು ಹಾಜರು ಪಡಿಸಿದ ನಿಪಿ-6 ಆಧಾರ ಕಾರ್ಡ ಪ್ರಕಾರ ನನ್ನ ತಂದೆಯ ಜನ್ಮ ದಿನಾಂಕ 01.01.1958 ಎಂದರೆ ಸರಿ. ಸದರಿ ಅಪಘಾತದ ಸಮಯದಲ್ಲಿ ನನ್ನ ತಂದೆಗೆ 67 ವರ್ಷ ವಯಸ್ಸಾಗಿತ್ತು ಎಂದರೆ ಸರಿ. 3 ಮತ್ತು 4 ನೇ ಆರ್ಜಿದಾರರು ನನ್ನ ಸಹೋದರಿಯರು ಅವರ ಮದುವೆ ಆಗಿದೆ ಎಂದರೆ ಸರಿ. ಸದರಿಯವರು ಮದುವೆ ಮಾಡಿಕೊಂಡು ಅವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ 4 ನೇ ಅರ್ಜಿದಾರಳು ನಮ್ಮ ಮನೆಯಲ್ಲಿ ಇದ್ದಾಳೆ ಎನ್ನುತ್ತಾರೆ.  ಸದರಿ 4 ನೇ ಅರ್ಜಿದಾರಳು ನಮ್ಮ ಮನೆಯಲ್ಲಿ ವಾಸ ಇರುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ.

2. ನಾನು ನೌಕರಿ ಮಾಡುತ್ತೇನೆ ಎಂದರೆ ಸರಿ. ಸದರಿ ನನ್ನ ತಂದೆಯ ಆದಾಯದ ಮೇಲೆ ನಾವು ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ಈಗ 1 ವರ್ಷದ ಹಿಂದೆ ಆಗಿರುತ್ತದೆ. ಸದರಿ ಅಪಘಾತ ದಿನಾಂಕ 31.05.2025 ರಂದು ಬೆಳಿಗ್ಗೆ 11.30 ರ ಸಮಯದಲ್ಲಿ ಕಾರ್ಪೋರೇಷನ್ ವಾಹನದವರು ನನ್ನ ತಂದೆಗೆ ಡಿಕ್ಕಿ ಪಡಿಸಿರುತ್ತಾರೆ. ನನ್ನ ತಂದೆ ರಸ್ತೆ ದಾಟುತ್ತಿರಬೇಕಾದರೆ ನನ್ನ ತಂದೆಗೆ ಡಿಕ್ಕಿ ಪಡಿಸಿರುತ್ತಾರೆ. ಸದರಿ ಕಾರ್ಪೋರೇಷನ್ ವಾಹನಕ್ಕೆ ಪರ್ಮಿಟ್ ಇರಲಿಲ್ಲ ಹಾಗೂ ಸದರಿ ವಾಹನದ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ ಸದರಿ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಅಪಘಾತದ ಸಮಯದಲ್ಲಿ ಸದರಿ ಚಾಲಕನಿಗೆ ಊರ್ಜಿತವಾದ ಚಾಲನಾ ಪರವಾನಿಗೆ ಪತ್ರ ಇರಲಲ್ಲ ಎಂದರೆ ಸರಿಯಲ್ಲ

3. ಸದರಿ ನನ್ನ ತಂದೆ ಅಪಘಾತವಾದ 3 ದಿನಗಳ ನಂತರ ತೀರಿಕೊಂಡಿರುತ್ತಾರೆ. ಸದರಿ ನನ್ನ ತಂದೆ ಅಪಘಾತದ ಗಾಯಗಳಿಂದ ತೀರಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವಾದ ತಕ್ಷಣ ನನ್ನ ತಂದೆಯನ್ನು ಮೊದಲು ಕಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಯಿತು. ಸದರಿ ಪಿ ಎಂ ವರದಿಯಲ್ಲಿ ನನ್ನ ತಂದೆ ಅಪಘಾತ ಗಾಯಗಳಿಂದಾಗಿ ತೀರಿಕೊಂಡ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ ನನ್ನ ತಂದೆ ಯಾವುದೇ ರೀತಿಯ ಕೆಲಸವನ್ನು ಮಾಡುತ್ತಿರಲಿಲ್ಲ ಎಂರದೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೂಲಿ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ನನ್ನ ತಂದೆ ತಿಂಗಳಿಗೆ 25 ಸಾವಿರ ಸಂಪಾದಿಸುತ್ತಿದ್ದರು ಎಂಬುದನ್ನು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವಾದ ದಿನ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ ಸದರಿ ವಾಹನದ ಚಾಲಕನಿಗೆ ಊರ್ಜಿತವಾದ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಹಾಗೂ ಸದರಿ ಅಪಘಾತದಿಂದಾಗಿ ನನ್ನ ತಂದೆ ತೀರಿಕೊಂಡಿಲ್ಲ ಆದ್ದರಿಂದ 2 ನೇ ಎದುರುದಾರರು ನಮಗೆ ಪರಿಹಾರ ನೀಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ಪರಿಹಾರ ಕೋರಿ ನಾವು ಬೇರೆ ಯಾವುದೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿಲ್ಲ.

<u>: ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

**1** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್